**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.**

ಪಿ ಸಿ ಆರ್ ನಂಃ 47/2026

ಸಿ ಡಬ್ಲುಃ 1.

| | |
|---|---|
| ಸಾಕ್ಷಿದಾರರ ಹೆಸರು | ಅಶೋಕ ಮೇಸ್ತ |
| ತಂದೆಯ ಹೆಸರು | ವಾಸುದೇವ ಮೇಸ್ತ |
| ವಯಸ್ಸು | 38 |
| ಉದ್ಯೋಗ | ವಕೀಲರು |
| ವಾಸ್ತವ್ಯ | ಎಂ ಜಿ ರೋಡ್, ಪ್ರಭಾತ ನಗರ, ಹೊನ್ನಾವರ.<br>ಹಾಲಿ ವಾಸ್ತವ್ಯಃ No.21, 1st floor, 8th B main road, 3rd stage, Manjunath Nagar, Banagalore. |

ಸಾಕ್ಷಿಯನ್ನು ದಿನಾಂಕ **07-03-2026** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಸ್ವಪ್ರಮಾಣೀಕೃತ ಹೇಳಿಕೆಃ**

ನಾನು ಈ ಪ್ರಕರಣದ ಫಿರ್ಯಾದಿಯಿರುತ್ತೇನೆ. ನನ್ನ ವೃತ್ತಿಯ ಮೇಲೆ ಆರೋಪ ಮಾಡಿದಕ್ಕಾಗಿ ನಾನು ಈ ಪ್ರಕರಣ ಮಾಡಿದ್ದೇನೆ. ನನ್ನ ಮೇಲೆ ಸುಳ್ಳು ಆರೋಪ ಮಾಡಿರುತ್ತಾರೆ. ನಾನು ವೃತ್ತಿಯಲ್ಲಿ ವಕೀಲನಾಗಿದ್ದೇನೆ. ನಾನು ವಕೀಲ ವೃತ್ತಿನಿರತನಾಗಿದ್ದೇನೆ. ನಾನು ಬೆಂಗಳೂರು, ಹೊನ್ನಾವರ, ಸಾಗರ, ಬೆಳಗಾವಿ, ರಾಮದುರ್ಗ, ಕುಂದಾಪುರ ಇಲ್ಲಿ ವೃತ್ತಿ ಮಾಡುತ್ತೇನೆ. ನಾನು ಬೆಂಗಳೂರು ಉಚ್ಚ ನ್ಯಾಯಾಲಯದಲ್ಲಿ ವೃತ್ತಿ ಮಾಡುತ್ತೇನೆ. ನನ್ನ ರೋಲ್ ನಂ.KAR/504/2013 ಆಗಿರುತ್ತದೆ. ಮುದ್ರಿ ಶಿವಮ್ಮ ದೇವಸ್ಥಾನ ಇದರ ಬಗ್ಗೆ ನಾವು ದಾವೆಯನ್ನು ಘೋಷಣೆ ಹಾಗೂ ನಿರ್ಭಂದಕಾಜ್ಞೆಗಾಗಿ ಹೂಡಿದ್ದೆವು. ಈ ದಾವೆಯನ್ನು ಸುರೇಶ ಲಿಂಗ ಮೇಸ್ತ ಹಾಗೂ ಇತರರ ಮೇಲೆ ಮಾಡಿದ್ದೆವು. ಹಾಗೂ ಖಾಸಗಿ ಫಿರ್ಯಾದನ್ನು 1 ನೇ ಪ್ರತಿವಾದಿಯಾದ ಈ ಪ್ರಕರಣದ ಆರೋಪಿ ವಿರುದ್ಧ ಮಾಡಿದ್ದೇವೆ. ಈ ದಾವೆಯನ್ನು ದಿಃ 10-11-2025 ರಂದು ಹಾಕಿದ್ದೆವು. ಅದಕ್ಕೆ ಸಂಬಂಧಪಟ್ಟು ಪ್ರತಿವಾದಿಯವರು ಅದೇ ದಿವಸ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಅದರಲ್ಲಿ ತಕರಾರನ್ನು ದಿಃ 19-11-2025 ರಂದು ಅವರು ಹಾಕಿದ್ದರು. ಉದಾಹರಣೆಯ ಪ್ಯಾರಾ 13 ರಲ್ಲಿ "ಅಶೋಕ ಮೇಸ್ತ ವಕೀಲರ ಕುತಂತ್ರೆಯ ಮೇರೆಗೆ" ಎಂದು ನಮೂದಿಸಿದ್ದಾರೆ. ಅದರ ನಂತರ ಉದಾಹರಣೆಯಲ್ಲಿ ಪ್ಯಾರ 15 ಹಾಗೂ ಪ್ರತಿ ಮಾಗಣೆಯಲ್ಲಿ " ಅಶೋಕ ಮೇಸ್ತ ಇವರ ದುಷ್ಟ ಸಲಹೆಯಂತೆ" ಎಂದು ನಮೂದಿಸಿದ್ದಾರೆ. ಹಾಗೂ ಪ್ರತಿ ಮಾಗಣಿಯಲ್ಲಿ "ಅಶೋಕ ಮೇಸ್ತ ಈತನು ಕುಟುಂಬದಲ್ಲಿ ಒಡಕು ತಂದಿದ್ದು ಇರುತ್ತದೆ ಹಾಗೂ ಬೋಗಸ್ ಟ್ರಸ್ಟ

ಮಾಡಿದ್ದೇನೆ" ಎಂದು ನಮೂದಿಸಿದ್ದು ಇರುತ್ತದೆ. ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದು ಇರುತ್ತದೆ. ನಾನು ಈಗ ಹಾಜರುಪಡಿಸುವ ದಾಖಲೆಗಳನ್ನು ಪ್ರಮಾಣಪತ್ರದ ಭಾಗವೆಂದು ಪರಿಗಣಿಸಬೇಕೆಂದು ವಿನಂತಿ. ಈ ಒಂದು ಪ್ರತಿವಾದ ಪತ್ರದಿಂದ ನನ್ನ ಘನತೆ, ಗೌರವಕ್ಕೆ ಹಾನಿಯಾಗಿದೆ. ಪ್ರತಿವಾದ ಪತ್ರದ ಅಂಶಗಳಿಂದ ನನ್ನ ವೃತ್ತಿಗೆ ತೊಂದರೆಯಾಗಿದೆ. ನನ್ನ ವೃತ್ತಿಗೆ ಅಪಕೀರ್ತಿ ತರುವ ಕೆಲಸವನ್ನು ಮಾಡಿದ್ದಾರೆ. ನಾನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ವೃತ್ತಿ ಮಾಡುವುದರಿಂದ ಈ ರೀತಿ ಮಾಡಿದ್ದಾರೆ. ಪ್ರತಿವಾದಿಯರು ಈ ರೀತಿ ಮಾಡಿದ್ದಾರೆ ಎಂಬ ಕಾರಣದಿಂದ ದಿಃ 27-12-2025 ರಂದು ವಕೀಲರ ಮೂಲಕ ಆರೋಪಿತನಿಗೆ ಲೀಗಲ್ ನೋಟೀಸನ್ನು ನೀಡಿದ್ದೆನು. ಅದರಲ್ಲಿ ಪ್ರತಿವಾದ ಪತ್ರದಲ್ಲಿರುವ ಅಂಶಗಳನ್ನು ಹಿಂದೆ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಹಿಂದೆ ತೆಗೆದುಕೊಳ್ಳದೇ ಇದ್ದರೆ ಮಾನಹಾನಿಗೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಗುವುದು ಮತ್ತು ತಪ್ಪಿದಲ್ಲಿ ರೂಪಾಯಿ 15 ಲಕ್ಷ ಪರಿಹಾರವನ್ನು ನೀಡುವಂತೆ ಸದರಿ ನೋಟೀಸಿನಲ್ಲಿ ನಮೂದಿಸಿದ್ದೇನೆ. ಅದರ ನಂತರ ದಿಃ 12-01-2026 ರಂದು ಆರೋಪಿತರು ಮಾನಹಾನಿಕಾರಕ ಅಂಶಗಳನ್ನು ಉದಾಹರಣೆಯಲ್ಲಿ ಬರೆದದ್ದು ಎಂದು ಒಪ್ಪಿಕೊಂಡಿದ್ದಾರೆ. ಆ ಕಾರಣದಿಂದ ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

2. ಫಿರ್ಯಾದಿದಾರರ ಎನ್ ರೋಲ್ ಮೆಂಟ್ ನ ನೋಟರೈಸ್ಡ ಪ್ರತಿಯನ್ನು **ನಿಸಿ.1** ಎಂದು, ಅರ್ಜಿದಾರರ practice certificate ನ ನೋಟರೈಸ್ಟ ಪ್ರತಿಯನ್ನು **ನಿಸಿ.2** ಎಂದು, ಕೆ ಎಸ್ ಪಿ ಸಿ ಯವರು ನೀಡಿದ ಐಡೆಂಟಿಟಿ ಕಾರ್ಡನ ನೋಟರೈಸ್ಟ ಪ್ರತಿಯನ್ನು **ನಿಸಿ.3** ಎಂದು, ಮೂಲ ದಾವಾ ನಂ. 155/2025 ಅದರ ಆದೇಶ ಪುಟದ ಧೃತೀಕೃತ ನಕಲನ್ನು **ನಿಸಿ.4** ಎಂದು, ಮೂಲ ದಾವಾ ನಂ. 155/2025 ರ ದಾವೆಯ ವಾದಪತ್ರ ಮತ್ತು ಪ್ರತಿವಾದ ಪತ್ರದ ಧೃಡೀಕೃತ ನಕಲನ್ನು ಕ್ರಮವಾಗಿ **ನಿಸಿ.5 ಮತ್ತು 6** ಎಂದು, ದಿಃ 27-12-2025 ರಂದು ನಾನು ವಕೀಲರ ಮೂಲಕ ಆರೋಪಿತನಿಗೆ ನೀಡಿದ ಲೀಗಲ್ ನೋಟೀಸಿನ ಕಚೇರಿಯ ನಕಲನ್ನು **ನಿಸಿ.7** ಎಂದು, ಅಂಚೆ ರಶೀದಿಯನ್ನು **ನಿಸಿ.8** ಎಂದು, ಆರೋಪಿತನು ವಕೀಲರ ಮೂಲಕ ನೀಡಿದ ಪ್ರತ್ಯುತ್ತರ ಪ್ರತಿಯನ್ನು **ನಿಸಿ.9** ಎಂದು ಗುರುತಿಸಲಾಯಿತು. ನಿಸಿ1 ರಿಂದ 3 ಗಳನ್ನು ಮೂಲ ದಾಖಲೆಗಳೊಂದಿಗೆ ಪರಿಶೀಲಿಸಿ ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**C/c. ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**